पावरग्रिड
POWERGRID

पावर ग्रिड कॉर्पोरेशन ऑफ इंडिया लिमिटेड
(भारत सरकार का उद्यम)
POWER GRID CORPORATION OF INDIA LIMITED
(A Government of India Enterprise)

**Registered Post with Acknowledgement Due**

Ref: SR-II: RTI:F-1100:20-21/2389

Date:24th July, 2020

To

Smt.A.C.Mamatha, Advocate,
Sridevi Nilaya,
Jagajyothi Basaveshwara Road,
Shanthinagar,
Tumkur – 572 102.

**Madam,**

**Sub: Information sought under RTI Act, 2005 – reg.**

This has reference to your application dated 23/06/2020 under RTI Act, 2005 received at this office on 26/06/2020. Copy of the disbursement orders for the compensation towards using of their land in Doddaballapur/Bangalore Rural, Chikkaballapur, Ramanagara Districts and Yelahanka is enclosed as Annexure-1.

As per section 19 of the Right to Information Act 2005, if required, you may file an appeal to the First Appellate Authority of the organisation within 30 days of the issue of this order. The address of the First Appellate Authority is given below:

Shri S.Ravi,
Executive Director (SRTS-II)
Power Grid Corporation of India Ltd.,
Singanayakanahalli, Yelahanka Hobli,
Bangalore 560 064.
e-mail : sr2edo@powergrid.co.in
Tel.No.: 080-23093701

Thanking you,

Yours faithfully,

24/07/20

(V.RAJESH)
Sr.General Manager & CPIO
e-mail id: sr2cpio@powergrid.co.in
Tel.No.: 080-23093711

Encl.: As above

Copy to: ED(SRTS-II), Appellate Authority, POWERGRID, SRTS-II, Bangalore - for kind information.

" Annexure-1 "

Doddaballapura ①

ಕರ್ನಾಟಕ ಸರ್ಕಾರ,
ಕಂದಾಯ ಇಲಾಖೆ.
ಜಿಲ್ಲಾಧಿಕಾರಿಯವರ ಕಾರ್ಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
ಫ್ಯಾಕ್ಸ್ 080-22860220 ದೂರವಾಣಿ: 080-22860412 ಇ-ಮೇಲ್: deo.bangalorer3@gmail.com

ನಂ.ಎಡಿಎಂ.ಎಂಎಸ್‌ಸಿ.ಸಿಆರ್.230/2017-18

ದಿನಾಂಕ 20-11-2017.

## ಪರಿಷ್ಕೃತ ಅಧಿಕೃತ ಜ್ಞಾಪನ (REVISED OFFICIAL REMINDER)

ವಿಷಯ : ಪವರ್‌ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯ ಲಿ.,ರವರ ವತಿಯಿಂದ ಎಲ್‌ಐಎಲ್‌ಓ 765/ಕೆಡಬ್ಲ್ಯೂ ವಿದ್ಯುತ್ ಲೈನ್ ಹಾದು ಹೋಗುತ್ತಿದ್ದು, ಈ ವಿದ್ಯುತ್ ಲೈನ್ ಅಡಿಯಲ್ಲಿ ಬರುವಂತಹ ಕೃಷಿ ಜಮೀನಿಗೆ ಹೆಚ್ಚುವರಿ ಪರಿಹಾರ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ : ಈ ಕಛೇರಿಯ ಅಧಿಕೃತ ಜ್ಞಾಪನ ಪತ್ರದ ಸಂ: ಎಡಿಎಂ.ಸಿಆರ್.91/13-14, ದಿನಾಂಕ: 08.08.2014.

ಮೆ॥ ಪವರ್ ಗ್ರಿಡ್ ಕಾರ್ಪೋರೇಷನ್ ರವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 400 ಕೆ.ವಿ. ಡಿ/ಸಿ ಮಧುಗಿರಿ-ಯಲಹಂಕ ಲೈನ್ ಮತ್ತು 765 ಕೆ.ವಿ ಡಿ/ಸಿ ಮಧುಗಿರಿ-ಧರ್ಮಪುರಿ (ತಮಿಳುನಾಡು) ಲೈನ್‌ಗಳನ್ನು ನಿರ್ಮಾಣ ಮಾಡುವ ಸಲುವಾಗಿ ಪವರ್‌ಲೈನ್ ಹಾದುಹೋಗುವ ಜಮೀನುಗಳ ಮಾಲೀಕರು ಹೆಚ್ಚುವರಿ ಪರಿಹಾರ ನೀಡಲು ಒತ್ತಾಯಿಸಿ ಪವರ್‌ಲೈನ್ ನಿರ್ಮಾಣ ಮಾಡುವ ಕಾಮಗಾರಿಗೆ ತಡೆಯೊಡ್ಡಿರುತ್ತಾರೆಂದು ಪವರ್‌ಗ್ರಿಡ್ ಅಧಿಕಾರಿಗಳು ಸಲ್ಲಿಸಿದ್ದ ವರದಿಯ ಮೇರೆಗೆ ಟೆಲಿಗ್ರಾಫ್ ಕಾಯಿದೆ, 1885ರ ಕಲಂ-16 ರಂತೆ ಈ ಕೆಳಕಂಡಂತೆ ಪರಿಹಾರದ ಹಣ ಪಾವತಿಸಲು ದಿನಾಂಕ: 08.08.2014 ರಂದು ಆದೇಶ ಮಾಡಲಾಗಿತ್ತು.

| ಕ್ರ. ಸಂ. | ಸ್ಟ್ರಕ್ಚರ್ ಕೆಟಗರಿ | ವಿಸ್ತೀರ್ಣ | | ನಿಗದಿಪಡಿಸಬೇಕಾದ ಪರಿಹಾರದ ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|---|
| 1 | 'ಎ' ಕೆಟಗರಿ | 200 ಚದರ ಮೀಟರ್ | 0-02 ಗುಂಟೆ | 3.50 |
| 2 | 'ಬಿ' ಕೆಟಗರಿ | 246 ಚದರ ಮೀಟರ್ | 0-02 1/2 ಗುಂಟೆ | 4.00 |
| 3 | 'ಡಿ' ಕೆಟಗರಿ | 300 ಚದರ ಮೀಟರ್ | 0-03 ಗುಂಟೆ | 5.00 |
| 4 | 'ಇ' ಕೆಟಗರಿ | 400 ಚದರ ಮೀಟರ್ | 0-04 ಗುಂಟೆ | 6.00 |

ಪವರ್‌ಗ್ರಿಡ್ ಕೈಗೊಂಡಿರುವ ಕಾಮಗಾರಿಗಳನ್ನು ಮುಂದುವರೆಸದಂತೆ ಭೂ ಮಾಲೀಕರು ಹಲವಾರು ಬಾರಿ ತಡೆಯುಂಟು ಮಾಡಿದ್ದ ಕಾರಣದಿಂದಾಗಿ, ಕಾಮಗಾರಿಗಳು ಕುಂಠಿತಗೊಂಡಿದ್ದ ಕಾರಣ ಈ ಬಗ್ಗೆ ಭೂ ಮಾಲೀಕರ, ರೈತ ಮುಖಂಡರ ಮತ್ತು ಪವರ್‌ಗ್ರಿಡ್ ಅಧಿಕಾರಿಗಳ ಸಭೆಯನ್ನು ಹಲವಾರು ಬಾರಿ ನಡೆಸಿದ್ದರೂ ಸಹ ಯಾವುದೇ ರೀತಿಯ ಪ್ರಯೋಜನವಾಗಿರುವುದಿಲ್ಲ. ಅಲ್ಲದೇ ಈ ಕುರಿತು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ದಿನಾಂಕ: 09.05.2017 ರಂದು ಮತ್ತು ಮಾನ್ಯ ಮುಖ್ಯ ಕಾರ್ಯದರ್ಶಿಯವರು ದಿನಾಂಕ: 18.05.2017 ರಂದು ರೈತ ಮುಖಂಡರ, ಭೂ ಮಾಲೀಕರ ಮತ್ತು ಪವರ್‌ಗ್ರಿಡ್ ಅಧಿಕಾರಿಗಳ ಸಭೆಯನ್ನು ನಡೆಸಿ ಚರ್ಚಿಸಿರುತ್ತಾರೆ. ಆದರೆ ಈ ಬಗ್ಗೆ ಯಾವುದೇ ಅಂತಿಮ ತೀರ್ಮಾನವಾಗಿರುವುದಿಲ್ಲ. ಆದರೆ ದಿನಾಂಕ: 19.07.2017 ರಂದು ಮಾನ್ಯ ಇಂಧನ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನವಾಗಿರುತ್ತದೆ.

"Minister directed all the DCs of Ramanagara, Bangalore (Urban) and Bangalore (Rural) to complete the balance works in various lines expeditiously assessing the compensation for the farmers under the corridor as per MOP guidelines paying 15% of land value (i.e. Market value/Stamp Act rate or 4 times the guidance value whichever is lower). Further, Minister advised POWERGRID to ensure that the compensation is paid expeditiously so that the work can be completed at the earliest."

ಮಾನ್ಯ ಇಂಧನ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸದರಿ ಸಭೆಯಲ್ಲಿ ಆಗಿರುವ ತೀರ್ಮಾನದಂತೆ ಈ ಹಿಂದೆ ಜಿಲ್ಲಾಧಿಕಾರಿಗಳು ಮಾಡಿದ್ದ ಆದೇಶವನ್ನು ಪರಿಷ್ಕರಿಸಿ ಈಗಾಗಲೇ ದೊಡ್ಡಬಳ್ಳಾಪುರ ತಾಲ್ಲೂಕಿನ 16 ಗ್ರಾಮಗಳು ಮತ್ತು ದೇವನಹಳ್ಳಿ ತಾಲ್ಲೂಕಿನ 8 ಗ್ರಾಮಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ಪರಿಹಾರ ಪಾವತಿಸುವ ಬಗ್ಗೆ ಪವರ್‌ಗ್ರಿಡ್ ಕಾಮಗಾರಿಯ ಹೆಚ್‌ಟಿ ಲೈನ್ ಹಾದು ಹೋಗಿರುವ ಜಮೀನುಗಳಿಗೆ ಮಾರ್ಗಸೂಚಿ ಬೆಲೆಯಲ್ಲಿ ನಿಗದಿಪಡಿಸಿರುವ ಖುಷ್ಕಿ, ತರಿ, ಬಾಗಾಯ್ತು ಜಮೀನುಗಳ ಮಾರ್ಗಸೂಚಿ ಬೆಲೆಯ ನಾಲ್ಕು ಪಟ್ಟು ಮೊತ್ತದ ಶೇ.15 ರಷ್ಟನ್ನು ಹೆಚ್ಚುವರಿ ಪರಿಹಾರವಾಗಿ ಪರಿಷ್ಕರಿಸಿ ನಿಗದಿಪಡಿಸಿ ಆದೇಶ ಹೊರಡಿಸಲಾಗಿರುತ್ತದೆ.

ಆದರೆ ದೊಡ್ಡಬಳ್ಳಾಪುರ ತಾಲ್ಲೂಕಿನ 23 ಗ್ರಾಮಗಳು, ದೇವನಹಳ್ಳಿ ತಾಲ್ಲೂಕಿನ 6 ಗ್ರಾಮಗಳು ಮತ್ತು ಹೊಸಕೋಟೆ ತಾಲ್ಲೂಕಿನ 20 ಗ್ರಾಮಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ಪರಿಹಾರವನ್ನು ನಿಗದಿಪಡಿಸಿರುವುದಿಲ್ಲ. ಸದರಿ ಗ್ರಾಮಗಳಿಗೆ ಈ ರೀತಿ ಪ್ರತ್ಯೇಕವಾಗಿ ವಿಚಾರಣೆ ನಡೆಸಿ ಆದೇಶ ಹೊರಡಿಸಲು ಕಾಲಾವಕಾಶ ಬೇಕಾಗುತ್ತದೆ. ಪವರ್‌ಗ್ರಿಡ್ ಹಾದುಹೋಗಿರುವ ಮಾರ್ಗದ ವ್ಯಾಪ್ತಿಯಲ್ಲಿ ಬರುವ ರೈತರಿಗೆ ಹೆಚ್ಚುವರಿ ಪರಿಹಾರ ಕೋರಿ ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಬೇಕೆಂಬ ಬಗ್ಗೆ ಯಾವುದೇ ಮಾಹಿತಿ ಅವರಿಗೆ ಇರುವುದಿಲ್ಲ. ರೈತರು ಈ ಕಛೇರಿಗೆ ಅರ್ಜಿ ಸಲ್ಲಿಸಿ ಮತ್ತು ವಿಚಾರಣೆಯ ಸಲುವಾಗಿ ಈ ಕಛೇರಿಗೆ ಪದೇ ಪದೇ ಓಡಾಡಬೇಕಾಗಿರುತ್ತದೆ.

[illegible]

[illegible]

[illegible]

[illegible]

(3)

ಸದರಿ ಪವರ್‌ಗ್ರಿಡ್ ವ್ಯಾಪ್ತಿಯಲ್ಲಿ ಬರುವ ಬಹುತೇಕ ರೈತರು ಬಡತನ ರೇಖೆಗಿಂತ ಕೆಳಮಟ್ಟದಲ್ಲಿದ್ದು, ಯಾವ ರೀತಿ ಅರ್ಜಿ ಸಲ್ಲಿಸಬೇಕೆಂಬ ಬಗ್ಗೆ ರೈತರಿಗೆ ಸರಿಯಾದ ಮಾಹಿತಿ ಇಲ್ಲದೇ ತುಂಬಾ ಗೊಂದಲದ ಪರಿಸ್ಥಿತಿಯಲ್ಲಿದ್ದು, ಇದುವರೆಗೂ ಹೆಚ್ಚುವರಿ ಪರಿಹಾರ ಕೋರಿ ಈ ಕಛೇರಿಗೆ ಅರ್ಜಿ ಸಲ್ಲಿಸದೇ ಇರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಹೆಚ್ಚುವರಿ ಪರಿಹಾರದ ಬಗ್ಗೆ ಬಾಕಿ ಇರುವ ಎಲ್ಲಾ ಗ್ರಾಮಗಳಿಗೆ ಅನ್ವಯವಾಗುವಂತೆ ಈ ಕಛೇರಿಯಿಂದ ಆದೇಶ ಹೊರಡಿಸಿದಲ್ಲಿ ಪವರ್‌ಗ್ರಿಡ್ ಅಧಿಕಾರಿಗಳು ತಾವು ನಡೆಸುತ್ತಿರುವ ಮಾರ್ಗದ ಕಾಮಗಾರಿ ವ್ಯಾಪ್ತಿಯಲ್ಲಿ ಬರುವ ರೈತರಿಗೆ ಈ ಕಛೇರಿಯ ಆದೇಶದ ಪ್ರಕಾರ ಹೆಚ್ಚುವರಿ ಪರಿಹಾರದ ಹಣವನ್ನು ಪಾವತಿಸಿ ಕಾಮಗಾರಿಯನ್ನು ಯಾವುದೇ ಅಡ್ಡಿ ಆತಂಕಗಳಿಲ್ಲದೇ ಶೀಘ್ರವಾಗಿ ಪೂರ್ಣಗೊಳಿಸಲು ಅನುಕೂಲವಾಗುತ್ತದೆ. ಬಾಕಿ ಇರುವ ಎಲ್ಲಾ ಗ್ರಾಮಗಳಿಗೆ ಸಂಬಂದಿಸಿದಂತೆ ಒಂದೇ ಆದೇಶದಲ್ಲಿ ಹೆಚ್ಚುವರಿ ಪರಿಹಾರ ನಿಗದಿಪಡಿಸಿ ಕೊಡಲು ತಮ್ಮ ಅಭ್ಯಂತರ ಇರುವುದಿಲ್ಲವೆಂದು ಭೂ ಮಾಲೀಕರ ಪರವಾಗಿ ಶ್ರೀ ಸತೀಶ್ ಕಡತನಮಲೆ, ವಕೀಲರು ಮತ್ತು ಡೆಪ್ಯೂಟಿ ಜನರಲ್ ಮ್ಯಾನೇಜರ್, ಪವರ್‌ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿ., ರವರು ಮನವಿ ಸಲ್ಲಿಸಿರುತ್ತಾರೆ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ 765 ಕೆ.ವಿ. ಮಧುಗಿರಿ-ಧರ್ಮಪುರಿ (ತಮಿಳುನಾಡು) ಟ್ರಾನ್ಸ್‌ಮಿಷನ್ ಮಾರ್ಗದಲ್ಲಿ ಬರುವ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಆದೇಶ ಹೊರಡಿಸಲು ಬಾಕಿ ಇರುವ ಎಲ್ಲಾ ಗ್ರಾಮಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿ ಬೆಲೆಯಲ್ಲಿ ನಿಗದಿಪಡಿಸಿರುವ ಖುಷ್ಕಿ, ತರಿ, ಬಾಗಾಯ್ತು ಜಮೀನುಗಳ ಮಾರ್ಗಸೂಚಿ ಬೆಲೆಯ ನಾಲ್ಕು ಪಟ್ಟು ಮೊತ್ತದ ಶೇ.15 ರಷ್ಟನ್ನು ಹೆಚ್ಚುವರಿ ಪರಿಹಾರವಾಗಿ ಪರಿಷ್ಕರಿಸಿ ನಿಗದಿಪಡಿಸುವುದು ಸೂಕ್ತವೆಂದು ತೀರ್ಮಾನಿಸಿ ಈ ಕೆಳಗಿನಂತೆ ಪರಿಷ್ಕರಿಸಿ ಆದೇಶಿಸಲಾಗಿದೆ.

## ಆದೇಶ

765 ಕೆ.ವಿ. ಮಧುಗಿರಿ-ಧರ್ಮಪುರಿ (ತಮಿಳುನಾಡು) ಟ್ರಾನ್ಸ್‌ಮಿಷನ್ ಮಾರ್ಗದಲ್ಲಿ ಬರುವ ದೊಡ್ಡಬಳ್ಳಾಪುರ ತಾಲ್ಲೂಕಿನ ಈ ಕೆಳಕಂಡ ಗ್ರಾಮಗಳಿಗೆ ಸಂಬಂಧಿಸಿದಂತೆ ಗ್ರಾಮಗಳಲ್ಲಿ ಪವರ್‌ಗ್ರಿಡ್ ಕಾಮಗಾರಿಯ ಹೆಚ್‌ಟಿ ಲೈನ್ ಹಾದು ಹೋಗಿರುವ ಜಮೀನುಗಳಿಗೆ ಮೇಲ್ಕಂಡ ಮಾರ್ಗಸೂಚಿ ಬೆಲೆಯಲ್ಲಿ ನಿಗದಿಪಡಿಸಿರುವ ಖುಷ್ಕಿ, ತರಿ, ಬಾಗಾಯ್ತು ಜಮೀನುಗಳ ಬೆಲೆಯ ನಾಲ್ಕು ಪಟ್ಟು ಮೊತ್ತದ ಶೇ.15 ರಷ್ಟನ್ನು ಹೆಚ್ಚುವರಿ ಪರಿಹಾರವಾಗಿ ಪರಿಷ್ಕರಿಸಿ ನಿಗದಿಪಡಿಸಲಾಗಿದೆ.

<u>ದೊಡ್ಡಬಳ್ಳಾಪುರ ತಾಲ್ಲೂಕು</u>

1. ಗುಳ್ಯನಂದಿಗುಂಡ ಗ್ರಾಮ
2. ಹೆಗ್ಗಡಿಹಳ್ಳಿ ಗ್ರಾಮ
3. ಮಾಚಗೊಂಡನಹಳ್ಳಿ ಗ್ರಾಮ
4. ಚೋಗೊಂಡನಹಳ್ಳಿ ಗ್ರಾಮ
5. ಮೆಳೆಕೋಟೆ ಗ್ರಾಮ
6. ಮಾರಹಳ್ಳಿ ಗ್ರಾಮ
7. ಗಂಟಿಗಹಳ್ಳಿ ಗ್ರಾಮ

8. ಕರಿವೆಕೆರೆ ಗ್ರಾಮ
9. ಹಿರೇನಗುಡ್ಡದಹಳ್ಳಿ ಗ್ರಾಮ
10. ದಿನ್ನೇನಹಳ್ಳಿ ಗ್ರಾಮ
11. ಮುತುಗದಹಳ್ಳಿ ಗ್ರಾಮ
12. ಕರನಾಳ ಗ್ರಾಮ
13. ತೂಬಗೆರೆ ಗ್ರಾಮ
14. ನರಗಾನಹಳ್ಳಿ ಗ್ರಾಮ
15. ಲಕ್ಷ್ಮಿದೇವಿಪುರ ಗ್ರಾಮ
16. ಹಾಡೋನಹಳ್ಳಿ ಗ್ರಾಮ
17. ತಿರುಮಗೊಂಡನಹಳ್ಳಿ ಗ್ರಾಮ
18. ಬಚ್ಚಹಳ್ಳಿ ಗ್ರಾಮ
19. ಅಲ್ಲಾಳಸಂದ್ರ ಗ್ರಾಮ
20. ಅಂತ್ರಹಳ್ಳಿ ಗ್ರಾಮ
21. ಚಿಕ್ಕಕಾಳೇನಹಳ್ಳಿ ಗ್ರಾಮ
22. ಬದ್ರಾಪುರ ಗ್ರಾಮ
23. ಶಿರಿಗೊಂಡನಹಳ್ಳಿ ಗ್ರಾಮ.

**ದೇವನಹಳ್ಳಿ ತಾಲ್ಲೂಕು**

1. ಇರಿಗೇನಹಳ್ಳಿ ಗ್ರಾಮ
2. ವೆಂಕಟಗಿರಿಕೋಟೆ ಗ್ರಾಮ
3. ಹೊಸಹುಡ್ಯ ಗ್ರಾಮ
4. ದೊಡ್ಡಸಾಗರಹಳ್ಳಿ ಗ್ರಾಮ
5. ಕೆಂಪತಿಮ್ಮನಹಳ್ಳಿ ಗ್ರಾಮ

**ಹೊಸಕೋಟೆ ತಾಲ್ಲೂಕು**

1. ಇಸ್ತೂರು ಗ್ರಾಮ
2. ಇಸ್ತೂರು ಹೊಸಹಳ್ಳಿ ಗ್ರಾಮ
3. ಇಟ್ಟಸಂದ್ರ ಗ್ರಾಮ
4. ಗೆದ್ದಲಹಳ್ಳಿಪುರ ಗ್ರಾಮ
5. ನಂದಗುಡಿ ಗ್ರಾಮ
6. ಎಸ್.ವಡ್ಡಹಳ್ಳಿ ಗ್ರಾಮ
7. ಗಿಡ್ಡನಹಳ್ಳಿ ಗ್ರಾಮ
8. ಮುದ್ದನಹಳ್ಳಿ ಗ್ರಾಮ
9. ಕೊಂಡ್ರಹಳ್ಳಿ ಗ್ರಾಮ
10. ಹುಲುವನಹಳ್ಳಿ ಗ್ರಾಮ
11. ಬಂಡಹಳ್ಳಿ ಗ್ರಾಮ
12. ಹೆತ್ತಕ್ಕಿ ಗ್ರಾಮ
13. ಅಗಸರಹಳ್ಳಿ ಗ್ರಾಮ
14. ಬಣಮಾಕನಹಳ್ಳಿ ಗ್ರಾಮ

16. ತಾವರಕೆರೆ ಗ್ರಾಮ

ಸದರಿ ಗ್ರಾಮಗಳಲ್ಲಿ ಮೇಲ್ಕಂಡ ಕಾಮಗಾರಿಯು ಹಾದುಹೋಗಿರುವ ಎಲ್ಲಾ ಜಮೀನುಗಳ ತರಹೆಯ ಬಗ್ಗೆ ಮತ್ತು ಎಷ್ಟು ವಿಸ್ತೀರ್ಣವನ್ನು ಸದರಿ ಕಾಮಗಾರಿಗೆ ಉಪಯೋಗಿಸಿಕೊಳ್ಳಲಾಗಿದೆ ಎಂಬ ಬಗ್ಗೆ ತಹಶೀಲ್ದಾರ್‌ರವರು ಮೋಜಿಣಿದಾರರ ಮುಖಾಂತರ ಅಳತೆ ಮಾಡಿಸಿ ಕರಾರುವಕ್ಕಾದ ವಿಸ್ತೀರ್ಣದ ಬಗ್ಗೆ ಮತ್ತು ಜಮೀನಿನ ತರಹೆಯ ಬಗ್ಗೆ ಪ್ರತಿವಾದಿಗಳಿಗೆ ನಕಾಶೆ ಮತ್ತು ಪಹಣಿ ಪ್ರತಿಯೊಂದಿಗೆ ವರದಿಯನ್ನು ನೀಡತಕ್ಕದ್ದು. ತಹಶೀಲ್ದಾರ್‌ರವರು ನೀಡುವ ವರದಿಯನ್ನಾಧರಿಸಿ ಪ್ರತಿವಾದಿಗಳು ಮೇಲ್ಕಂಡಂತೆ ಪರಿಷ್ಕರಿಸಿದ ದರದಲ್ಲಿ ಲೆಕ್ಕಾಚಾರ ಮಾಡಿ ಪರಿಹಾರದ ಹಣವನ್ನು ಪಾವತಿಸುವ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಲು ಪರಿಷ್ಕರಿಸಿ ಆದೇಶಿಸಲಾಗಿದೆ.

ಜಿಲ್ಲಾಧಿಕಾರಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಪ್ರತಿಯನ್ನು:

1. ಶ್ರೀ ಸತೀಶ್ ಕಡತನಮಲೆ, ಅರ್ಜಿದಾರರ ಪರ ವಕೀಲರು, ಬೆಂಗಳೂರು ರವರಿಗೆ.
2. ಡೆಪ್ಯೂಟಿ ಜನರಲ್ ಮ್ಯಾನೇಜರ್, ಪವರ್‌ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿ., ಸದರನ್ ಟ್ರಾನ್ಸ್ಮಿಷನ್ ಸಿಸ್ಟಂ-II ಹೆಚ್‌ಕ್ಯೂ ಪ್ರಗತಿ ಮಹಾಲಕ್ಷ್ಮಿ, ಸೌತ್‌ಬ್ಲಾಕ್, ನಂ.62, 3ನೇ ಕ್ರಾಸ್, ಎಂಇಐ ರಸ್ತೆ, ಇಂಡಸ್ಟ್ರಿಯಲ್ ಸಬರ್ಬ್, ಯಶವಂತಪುರ, ಬೆಂಗಳೂರು-22 ರವರಿಗೆ ಸೂಕ್ತ ಕ್ರಮಕ್ಕಾಗಿ.
3. ತಹಶೀಲ್ದಾರ್, ದೊಡ್ಡಬಳ್ಳಾಪುರ, ದೇವನಹಳ್ಳಿ ಮತ್ತು ಹೊಸಕೋಟೆ ತಾಲ್ಲೂಕು ರವರಿಗೆ ರವಾನಿಸುತ್ತಾ, ಮೇಲ್ಕಂಡ ಆದೇಶದಲ್ಲಿ ತಿಳಿಸಿರುವಂತೆ ಪವರ್‌ಗ್ರಿಡ್ ಹೆಚ್‌ಟಿ ಲೈನ್ ಹಾದುಹೋಗಿರುವ ಮೇಲ್ಕಂಡ ಗ್ರಾಮಗಳ ಎಲ್ಲಾ ಜಮೀನುಗಳನ್ನು ಮೋಜಿಣಿದಾರರ ಮುಖಾಂತರ ಅಳತೆ ಮಾಡಿಸಿ ನಕಾಶೆ ಹಾಗೂ ಪಹಣಿ ಪ್ರತಿಯೊಂದಿಗೆ ಡೆಪ್ಯೂಟಿ ಜನರಲ್ ಮ್ಯಾನೇಜರ್, ಪವರ್‌ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿ., ರವರಿಗೆ ತುರ್ತಾಗಿ ನೀಡುವ ಬಗ್ಗೆ ಕ್ರಮವಹಿಸಲು ತಿಳಿಸಿದೆ.

[illegible]

[illegible]

[illegible]

[illegible]

[illegible]

Chikkaballapur (6)

A-2

ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ

ಸಂಖ್ಯೆ: ಎಲ್ಎಕ್ಯೂಸಿಆರ್.10/2017-18

ದಿನಾಂಕ: 23 /11/2017

## ಅಧಿಕೃತ ಜ್ಞಾಪನ

ವಿಷಯ : ಮೆ॥ ಪವರ್ ಗ್ರಿಡ್ ಕಾರ್ಪೋರೇಷನ್ ಲಿಮಿಟೆಡ್‌ನ ವತಿಯಿಂದ ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಹಾದು ಹೋಗತ್ತಿರುವ 765 ಕೆ.ವಿ. ವಿದ್ಯುತ್ ಪ್ರಸರಣ ತಂತಿಯನ್ನು ಅಳವಡಿಸುವ ಸಂಬಂಧ ಉಪಯೋಗಿಸಿಕೊಳ್ಳುತ್ತಿರುವ ರೈತರ ಜಮೀನಿಗೆ ಪರಿಹಾರವನ್ನು ನೀಡುವ ಬಗ್ಗೆ.

ಉಲ್ಲೇಖ : 1. ಈ ಕಚೇರಿಯ ಸಭಾ ನಡವಳಿ ಸಂಖ್ಯೆ: ಎಲ್ಎಕ್ಯೂಸಿಆರ್.26/2014-15, ದಿನಾಂಕ: 29/12/2014.

2. ಈ ಕಚೇರಿಯ ಸಭಾ ನಡವಳಿಯ ಸಮಸಂಖ್ಯೆ ದಿನಾಂಕ: 22/11/2017.

******

ಮೆ॥ ಪವರ್ ಗ್ರಿಡ್ ಕಾರ್ಪೋರೇಷನ್ ಲಿಮಿಟೆಡ್‌ನ ವತಿಯಿಂದ ತಮಿಳುನಾಡಿನ ಧರ್ಮಪುರಿ (ಸೇಲಂ) ನಿಂದ ಕರ್ನಾಟಕದ ತುಮಕೂರು ಜಿಲ್ಲೆಯ ಮಧುಗಿರಿ ರವರೆವಿಗೆ 765 ಕೆ.ವಿ. ವಿದ್ಯುತ್ ಪ್ರಸರಣ ತಂತಿಯನ್ನು ಅಳವಡಿಸುವ ಯೋಜನೆಯು ಅಂತಿಮ ಹಂತದಲ್ಲಿದ್ದು, ಸದರಿ ಯೋಜನೆಯಲ್ಲಿ ವಿದ್ಯುತ್ ಪ್ರಸರಣ ತಂತಿಯು ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ವಿದ್ಯುತ್ ಪ್ರಸರಣ ಮಾರ್ಗ ಹಾದು ಹೋಗುವ ರೈತರ ಜಮೀನಿಗೆ ಪರಿಹಾರ ನಿಗದಿಪಡಿಸಿ, ಅದರಂತೆ ಭೂಮಾಲೀಕರಿಗೆ ಪಾವತಿಸಲು ಉಲ್ಲೇಖ(1) ರ ಸಭಾ ನಡವಳಿಯಂತೆ ತೀರ್ಮಾನಿಸಲಾಗಿತ್ತು.

ಈ ಮಧ್ಯೆ ಮೆ॥ ಪವರ್ ಗ್ರಿಡ್ ಕಾರ್ಪೋರೇಷನ್ ಲಿಮಿಟೆಡ್‌ರವರು ಶಿಡ್ಲಘಟ್ಟ ತಾಲ್ಲೂಕಿನಲ್ಲಿ ವಿವಿಧ ಟವರ್ ನಿರ್ಮಾಣ ಮತ್ತು ತಂತಿಯನ್ನು ಅವಳಡಿಸುವ ಕಾರ್ಯಕ್ಕೆ ರೈತರಿಂದ ಅಡಚಣೆ ಉಂಟಾಗಿರುವುದಾಗಿ ತಿಳಿಸಿರುತ್ತಾರೆ. ಮೆ॥ ಪವರ್ ಗ್ರಿಡ್ ಕಾರ್ಪೋರೇಷನ್ ಲಿಮಿಟೆಡ್ ರವರ ಕೋರಿಕೆಯಂತೆ ದಿನಾಂಕ: 08/11/2017 ರಂದು ಶಿಡ್ಲಘಟ್ಟ ತಾಲ್ಲೂಕಿನ ರೈತ ಮುಖಂಡರು ಹಾಗೂ ಎಲ್ಲಾ ರೈತರ ಸಮ್ಮುಖದಲ್ಲಿ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಸಭೆಯನ್ನು ನಡೆಸಿ ಸಭಾ ನಡವಳಿಯಂತೆ, ಅಂತಿಮವಾಗಿ ಈ ಹಿಂದಿನ ಸಭಾ ನಡವಳಿಯ ನಿರ್ಣಯದಂತೆ ಪ್ರತಿ ಎಕರೆಗೆ ರೂ. 2.00 ಲಕ್ಷಗಳನ್ನು ಪಾವತಿಸುವಂತೆ ಆದೇಶಿಸಿದ್ದು, ಇದಕ್ಕೆ ಹೆಚ್ಚುವರಿ ಪರಿಹಾರವಾಗಿ ರೂ. 3.25 ಲಕ್ಷಗಳನ್ನು ಸೇರಿಸಿ ಒಟ್ಟು 5.25 ಲಕ್ಷಗಳ ಮೊತ್ತವನ್ನು ಪರಿಹಾರದ ರೂಪದಲ್ಲಿ ಪಾವತಿಸಲು ಮೆ॥ ಪವರ್ ಗ್ರಿಡ್ ಕಾರ್ಪೋರೇಷನ್ ಲಿಮಿಟೆಡ್‌ನ ಅಧಿಕಾರಿಗಳು ಒಪ್ಪಿರುವಂತೆ, ಇದಕ್ಕೆ ಎಲ್ಲಾ ರೈತ ಸಮೂಹದವರು ಸಹಮತವನ್ನು ವ್ಯಕ್ತಪಡಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಮೆ॥ ಪವರ್ ಗ್ರಿಡ್ ಕಾರ್ಪೋರೇಷನ್ ಲಿಮಿಟೆಡ್ ರವರು ಪವರ್ ಲೈನ್ ಅಳವಡಿಸುವ ಭೌಗೋಳಿಕ ವಿಸ್ತೀರ್ಣಕ್ಕೆ ಅನುಗುಣವಾಗಿ ಪ್ರತಿ ಎಕರೆಗೆ ಹಿಂದಿನ ನಿರ್ಣಯದಂತೆ ರೂ. 2.00 ಲಕ್ಷಗಳು ಮತ್ತು ಉಲ್ಲೇಖ(2) ರ ಸಭೆಯ ನಿರ್ಣಯದಂತೆ ರೂ. 3.25 ಲಕ್ಷಗಳು ಸೇರಿ ಒಂದು ಎಕರೆಗೆ ಒಟ್ಟು 5.25 ಲಕ್ಷಗಳ ಪರಿಹಾರದ ಹಣವನ್ನು ನೀಡತಕ್ಕದ್ದು. ಜಮೀನಿಗೆ ಪರಿಹಾರ ನೀಡುವ ಸಂದರ್ಭದಲ್ಲಿ ಕಂದಾಯ ದಾಖಲೆಗಳನ್ನು ಪರಿಶೀಲಿಸಿ, ದೃಢಪಡಿಸಿಕೊಂಡು ನೈಜ ಖಾತೆದಾರರಿಗೆ ಮಾತ್ರ ಪರಿಹಾರದ ಹಣವನ್ನು ಪಾವತಿಸತಕ್ಕದ್ದು.

ಜಿಲ್ಲಾಧಿಕಾರಿಗಳು (ಪ್ರಭಾರ),
ಚಿಕ್ಕಬಳ್ಳಾಪುರ ಜಿಲ್ಲೆ.

<u>ಪ್ರತಿಯನ್ನು</u> :

1. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರಿಗೆ ಮಾಹಿತಿಗಾಗಿ.
2. ~~ಅಸಿಸ್ಟೆಂಟ್ ಜನರಲ್ ಮ್ಯಾನೇಜರ್, ಮೆ॥ ಪವರ್ ಗ್ರಿಡ್ ಕಾರ್ಪೋರೇಷನ್ ಲಿಮಿಟೆಡ್, ಯಲಹಂಕ,~~ ಬೆಂಗಳೂರು ರವರಿಗೆ.
3. ಉಪವಿಭಾಗಾಧಿಕಾರಿಗಳು, ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ರವರಿಗೆ.
4. ತಹಶೀಲ್ದಾರ್, ಶಿಡ್ಲಘಟ್ಟ ತಾಲ್ಲೂಕು ರವರಿಗೆ.
5. ಕಚೇರಿ ಪ್ರತಿ.

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಯವರ ಕಾರ್ಯಾಲಯ, ಕಂದಾಯ ಭವನ, ರಾಮನಗರ ಜಿಲ್ಲೆ, ರಾಮನಗರ,

ನಂ. ರಾಜಿಕಾ/ಎಲ್.ಎ.ಕ್ಯೂ/ಸಿಆರ್/40/2015-16 ದಿನಾಂಕ:18-08-2017.

## ಅಧಿಕೃತ ಜ್ಞಾಪನ

ವಿಷಯ: ಮೇ॥ ಪವರ್ ಗ್ರಿಡ್ ಎನ್.ಎಂ.ಟ್ರಾನ್ಸ್‌ಮಿಷನ್ ಲಿಮಿಟೆಡ್‌ನ ವತಿಯಿಂದ ರಾಮನಗರ ಜಿಲ್ಲೆಯಲ್ಲಿ ಹಾದುಹೋಗುತ್ತಿರುವ 765 ಕೆ.ವಿ. ವಿದ್ಯುತ್ ಪ್ರಸರಣ ತಂತಿಯನ್ನು ಅಳವಡಿಸುವ ಸಂಬಂಧ ಉಪಯೋಗಿಸಿಕೊಳ್ಳುತ್ತಿರುವ ರೈತರ ಜಮೀನಿಗೆ ಪರಿಹಾರವನ್ನು ನೀಡುವ ಬಗ್ಗೆ.

ಉಲ್ಲೇಖ:
1. ಈ ಕಛೇರಿಯ ಸಮಸಂಖ್ಯೆ ಅಧಿಕೃತ ಜ್ಞಾಪನ ಪತ್ರ ದಿ: 10-12-2015
2. ಮಾನ್ಯ ಇಂಧನ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 19-07-2017 ರಂದು ನಡೆದ ಸಭಾ ನಡವಳಿ.
3. ಈ ಕಛೇರಿಯ ದಿನಾಂಕ: 04-08-2017 ರಂದು ನಡೆದ ಸಭೆಯ ತೀರ್ಮಾನದಂತೆ.

*****

ತಮಿಳುನಾಡಿನ ಧರ್ಮಪುರಿ (ಸೇಲಂ) ಇಂದ ಕರ್ನಾಟಕದ ತುಮಕೂರು ಜಿಲ್ಲೆ ಮಧುಗಿರಿ ರವರೆಗೆ 765 ಕೆ.ವಿ. ವಿದ್ಯುತ್ ಪ್ರಸರಣ ತಂತಿಯನ್ನು ಅಳವಡಿಸುವ ಯೋಜನೆಯು ಅಂತಿಮ ಹಂತದಲ್ಲಿದ್ದು, ಸದರಿ ಯೋಜನೆಯಲ್ಲಿ ವಿದ್ಯುತ್ ಪ್ರಸರಣ ತಂತಿಯು ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕು, ಮಾಗಡಿ ತಾಲ್ಲೂಕು ಹಾಗೂ ರಾಮನಗರ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ವಿದ್ಯುತ್ ಪ್ರಸರಣ ಮಾರ್ಗ ಹಾದುಹೋಗುವ ರೈತರ ಜಮೀನಿಗೆ ಪರಿಹಾರ ನಿಗಧಿಪಡಿಸಿ ಅದರಂತೆ ಭೂ ಮಾಲೀಕರಿಗೆ ಪಾವತಿಸಲು ಉಲ್ಲೇಖ (1) ರಲ್ಲಿ ಆದೇಶಿಸಲಾಗಿರುತ್ತದೆ.

ಈ ಮಧ್ಯೆ ಮೇ॥ ಪವರ್ ಗ್ರಿಡ್ ಎನ್.ಎಂ.ಟ್ರಾನ್ಸ್‌ಮಿಷನ್ ಲಿಮಿಟೆಡ್ ರವರು ಕನಕಪುರ ಹಾಗೂ ರಾಮನಗರ ತಾಲ್ಲೂಕುಗಳಲ್ಲಿ ವಿವಿಧ ಟವರ್ ನಿರ್ಮಾಣ ಮಾಡುವ ಕಾರ್ಯದಲ್ಲಿ ರೈತರಿಂದ ಅಡಚಣೆ ಉಂಟಾಗಿರುವುದಾಗಿ ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ದಿನಾಂಕ: 19-07-2017 ರಂದು ಮಾನ್ಯ ಇಂಧನ ಸಚಿವರು ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪ್ರಸಕ್ತ ಸಾಲಿನ ಮಾರ್ಗಸೂಚಿ ದರದ 4 ಪಟ್ಟಿನ ಪೈಕಿ ಶೇ.15 ರಷ್ಟು ಅಥವಾ ಜಮೀನಿನ ಮಾರುಕಟ್ಟೆ ದರದ ಶೇ. 15 ರಷ್ಟು ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಪಾವತಿಸುವಂತೆ ತೀರ್ಮಾನಿಸಿ, ಶೀಘ್ರವಾಗಿ ಆದೇಶವನ್ನು ಹೊರಡಿಸಲು ಆಯಾ ಜಿಲ್ಲಾಧಿಕಾರಿಗಳಿಗೆ ಸೂಚಿಸಿರುತ್ತಾರೆ.

ಅದರಂತೆ, ಪ್ರಸ್ತಾಪಿತ ಯೋಜನೆಗೆ ಈ ಹಿಂದೆ ಉಲ್ಲೇಖ(1)ರ ಅಧಿಕೃತ ಜ್ಞಾಪನ ಪತ್ರದಂತೆ ನಿಗಧಿಪಡಿಸಿರುವ ಮೊತ್ತಕ್ಕೆ ಬದಲಾಗಿ ಪ್ರಸಕ್ತ ಸಾಲಿನ ಮಾರ್ಗಸೂಚಿ ದರದ 4 ಪಟ್ಟಿನ ಪೈಕಿ ಶೇ. 15 ರಷ್ಟು ಮೊತ್ತದ ಪರಿಹಾರ ಹಣವನ್ನು ರೈತರಿಗೆ ಪಾವತಿಸಿ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಆದೇಶಿಸಲಾಗಿದೆ.

ಮೆ॥ ಪವರ್ ಗ್ರಿಡ್ ಎನ್.ಎಂ.ಟ್ರಾನ್ಸ್‌ಮಿಷನ್ ಲಿಮಿಟೆಡ್, ಬೆಂಗಳೂರು ರವರು ಪವರ್ ಲೈನ್ ಅಳವಡಿಸುವ 64 ಮೀಟರ್ ಕಾರಿಡಾರ್‌ನ (ಮಧ್ಯ ಭಾಗದಿಂದ 32 ಮೀಟರ್ ಅಳತೆಯ ಎರಡು ಕಡೆ) ಗಡಿಯನ್ನು ನಿಗದಿಪಡಿಸಿ ಆ ಗಡಿಯಲ್ಲಿ ಒಳಪಡುವ ಭೌಗೋಳಿಕ ವಿಸ್ತೀರ್ಣಕ್ಕೆ ಅನುಗುಣವಾಗಿ ಮೇಲ್ಕಂಡ ದರಗಳನ್ವಯ ಪರಿಹಾರದ ಹಣವನ್ನು ನೀಡತಕ್ಕದ್ದು. ಜಮೀನಿಗೆ ಪರಿಹಾರ ನೀಡುವ ಸಂದರ್ಭದಲ್ಲಿ ಕಂದಾಯ ದಾಖಲೆಗಳನ್ನು ಪರಿಶೀಲಿಸಿ, ದೃಢಪಡಿಸಿಕೊಂಡು ನೈಜ ಖಾತೆದಾರರಿಗೆ ಮಾತ್ರ ಪರಿಹಾರದ ಹಣವನ್ನು ಪಾವತಿಸತಕ್ಕದ್ದು.

ಜಿಲ್ಲಾಧಿಕಾರಿ
ರಾಮನಗರ ಜಿಲ್ಲೆ, ರಾಮನಗರ.

ಪ್ರತಿಯನ್ನು:

1. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ರಾಮನಗರ ಜಿಲ್ಲೆ, ರಾಮನಗರ ರವರಿಗೆ ಮಾಹಿತಿಗಾಗಿ.
2. ಉಪವಿಭಾಗಾಧಿಕಾರಿ, ರಾಮನಗರ ಉಪವಿಭಾಗ, ರಾಮನಗರ ರವರಿಗೆ ಮಾಹಿತಿಗಾಗಿ.
3. ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ರಾಮನಗರ ಜಿಲ್ಲೆ, ರಾಮನಗರ.
4. ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ರಾಮನಗರ ಜಿಲ್ಲೆ, ರಾಮನಗರ.
5. ತಹಶೀಲ್ದಾರ್, ಕನಕಪುರ/ರಾಮನಗರ/ಮಾಗಡಿ ತಾಲ್ಲೂಕು ರವರಿಗೆ ಮಾಹಿತಿಗಾಗಿ.
6. ಉಪ ಪ್ರಧಾನ ವ್ಯವಸ್ಥಾಪಕರು, ಮೇ॥ ಪವರ್ ಗ್ರೀಡ್ ಟ್ರಾನ್ಸ್‌ಮಿಷನ್ ಲಿಮಿಟೆಡ್, ಬೆಂಗಳೂರು ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.

ಕಛೇರಿ ಪ್ರತಿ.

ಜಿಲ್ಲಾಧಿಕಾರಿಗಳವರ ಕಾರ್ಯಾಲಯ ★ ರಾಮನಗರ ಜಿಲ್ಲೆ

Yelahanka (10)

**ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ನಡವಳಿ**

ವಿಷಯ:- ಮೆ॥ ಪವರ್‌ಗ್ರಿಡ್ ವತಿಯಿಂದ ನಿರ್ಮಿಸಲಾಗುತ್ತಿರುವ 400 ಕೆ.ವಿ ಡಿ/ಸಿ ಪಾವಗಡ-ದೇವನಹಳ್ಳಿ ಪ್ರಸರಣ ಮಾರ್ಗ ರಹದಾರಿಗೆ ಪರಿಹಾರ ವಿತರಿಸಲು ಮಾರುಕಟ್ಟೆ ದರ ನಿಗದಿಪಡಿಸುವ ಕುರಿತು.

ಉಲ್ಲೇಖ:-
1. ಕೇಂದ್ರ ಸರ್ಕಾರದ Ministry of Power, ನವದೆಹಲಿ ರವರ ಪತ್ರ ಸಂಖ್ಯೆ: 3/7/2015- Tran. ದಿನಾಂಕ:15-10-2015.
2. ಸರ್ಕಾರದ ಪತ್ರ ಸಂ:ಇಎನ್/23/ವಿಎಸ್‌ಸಿ/2016 ದಿನಾಂಕ: 10.02.2016.
3. ನೋಂದಣಿ ಮಹಾಪರೀವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ಬೆಂಗಳೂರು ರವರ ಪತ್ರ ಸಂ:ಸಿವಿಸಿ/09/2016-17 ದಿನಾಂಕ: 01.06.2016.
4. ಜಿಲ್ಲಾ ನೋಂದಣಾಧಿಕಾರಿಗಳು, ಗಾಂಧಿನಗರ ನೋಂದಣಿ ಜಿಲ್ಲೆ, ಬೆಂಗಳೂರು ರವರ ಪತ್ರ ಸಂ:ಜಿ.ನೋ/ಗಾ.ನೋ.ಜಿ./985/2019-20. ದಿನಾಂಕ:12-12-2019.
5. ವಿಶೇಷ ಭೂ-ಸ್ವಾಧೀನಾಧಿಕಾರಿಗಳು, ಬೆಂಗಳೂರು ರವರ ಪತ್ರ ಸಂ:ಎಸ್‌ಎಲ್‌ಎಓ/ಜಿಎಲ್/644/19-20. ದಿನಾಂಕ:17.12.2019.
6. ಶ್ರೀ.ಎ.ಶಂಕರ್ ರಾಜು, ಸೀನಿಯರ್ ಜನರಲ್ ಮ್ಯಾನೇಜರ್, ಪವರ್ ಗ್ರೀಡ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್, ರವರ ಪತ್ರ ಸಂ:ಎಸ್‌ಆರ್‌ಟಿಎಸ್-II/ಪಿವಿಜಿಡಿ-ಡಿವಿಹೆಚ್‌ಎಲ್/ಡಿಸಿ-ಬೆಂಗಳೂರು ಅರ್ಬನ್/2019-20. ದಿನಾಂಕ:13.08.2019.

******

**ಪ್ರಸ್ತಾವನೆ:**

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(6)ರ ಪತ್ರದಲ್ಲಿ ಮೆ॥ ಪವರ್‌ಗ್ರಿಡ್ ವತಿಯಿಂದ ನಿರ್ಮಿಸಲಾಗುತ್ತಿರುವ 400 ಕೆ.ವಿ ಡಿ/ಸಿ ಪಾವಗಡ-ದೇವನಹಳ್ಳಿ ಪ್ರಸರಣ ಮಾರ್ಗವು ಬೆಂಗಳೂರು ಜಿಲ್ಲೆ, ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಕುದುರೆಗೆರೆ, ಗಡೇನಹಳ್ಳಿ, ನವರತ್ನ ಅಗ್ರಹಾರ, ತರಬನಹಳ್ಳಿ, ಮೀನಕುಂಟೆ, ದೊಡ್ಡಜಾಲ, ದೊಡ್ಡಜಾಲ ಅಮಾನಿಕೆರೆ, ಹುತ್ತನಹಳ್ಳಿ ಮತ್ತು ಬಾಗಲೂರು ಗ್ರಾಮಗಳಲ್ಲಿ ಹಾದುಹೋಗುತ್ತಿದ್ದು ಸದರಿ ಗ್ರಾಮಗಳಲ್ಲಿರುವ ಜಮೀನುಗಳ ಭೂ-ಮಾಲೀಕರಿಗೆ/ರೈತರಿಗೆ ಟವರ್ ಹಾಗೂ ಲೈನ್ ಅಳವಡಿಸುವ ಪ್ರದೇಶಗಳಿಗೆ ಪರಿಹಾರ ವಿತರಿಸಲು ಮಾರುಕಟ್ಟೆ ದರವನ್ನು ನಿಗಧಿಪಡಿಸಿಕೊಡಬೇಕಾಗಿ ಶ್ರೀ.ಎ.ಶಂಕರ್ ರಾಜು, ಸೀನಿಯರ್ ಜನರಲ್ ಮ್ಯಾನೇಜರ್, ಪವರ್ ಗ್ರೀಡ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ ರವರು ಕೋರಿರುತ್ತಾರೆ.

ಉಲ್ಲೇಖ(1) ರಂತೆ ಕೇಂದ್ರ ಇಂಧನ ಮಂತ್ರಾಲಯವು ಹೊರಡಿಸಿರುವ ಮಾರ್ಗಸೂಚಿಯಲ್ಲಿ ಪವರ್ ಗ್ರಿಡ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟವರ್ ನಿರ್ಮಾಣದ ಪ್ರದೇಶಕ್ಕೆ Circle rate/Guideline value/ Stamp Act Rates ದರದ ಶೇ:85 ರಷ್ಟು ಮತ್ತು ಲೈನ್ ಹಾದು ಹೋಗುವ ಪ್ರದೇಶಕ್ಕೆ ದರದ ಶೇ.15ರಷ್ಟು ಪರಿಹಾರವನ್ನು ನಿಗದಿಪಡಿಸಲು ಹಾಗೂ ಮಾರುಕಟ್ಟೆ ದರ ನಿಗಧಿಪಡಿಸುವ ಸಂಬಂಧ ರಾಜ್ಯ ಸರ್ಕಾರ ತೀರ್ಮಾನ ತೆಗೆದುಕೊಳ್ಳಲು ಕೋರಿರುತ್ತದೆ.

ಅದರಂತೆ ರಾಜ್ಯ ಸರ್ಕಾರವು ಉಲ್ಲೇಖ(2)ರ ಪತ್ರದಲ್ಲಿ ಮೆ॥ ಪವರ್‌ಗ್ರಿಡ್ ವತಿಯಿಂದ ನಿರ್ಮಿಸಲಾಗುತ್ತಿರುವ ಪ್ರಸರಣ ಮಾರ್ಗ ರಹದಾರಿಯ ಪರಿಹಾರ ಮೊತ್ತವನ್ನು ಮಾರುಕಟ್ಟೆ ದರದಂತೆ ಕರ್ನಾಟಕ ಮುದ್ರಾಂಕ ಅಧಿನಿಯಮ 1957 ಕಲಂ 2 (ಎಂ.ಎಂ) ರಲ್ಲಿ ನೀಡಿರುವ ಮಾರ್ಗಸೂಚಿಯಂತೆ ಪಾಲಿಸಲು ನಿರ್ದೇಶಿಸಿರುತ್ತದೆ.

(11)

ಉಲ್ಲೇಖ(3)ರ ಪತ್ರದಲ್ಲಿ ಕರ್ನಾಟಕ ಮುದ್ರಾಂಕ ಅಧಿನಿಯಮ 1957 ಕಲಂ 2 (1) mm ಪ್ರಕಾರ ("Market Value is the subject-matter of an instrument, means the price which such property would have fetched, in the opinion of the Deputy commissioner or the Appellate Authority or the Chief Controlling Revenue Authority, if sold in open market on the date of execution of such instrument or the consideration stated in the instrument. Whichever is higher.") ಅನ್ವಯ ಪ್ರಸ್ತಾಪಿತ ಯಾವುದೇ ಸ್ವತ್ತುಗಳ ಮುಕ್ತ ಮಾರುಕಟ್ಟೆ ಮೌಲ್ಯ ನಿಗದಿಪಡಿಸಲು 'ಲಿಖಿತ ಪತ್ರ' ವನ್ನು ಜಿಲ್ಲಾನೋಂದಣಾಧಿಕಾರಿಗಳು/ಮುದ್ರಾಂಕಗಳ ಉಪ ಆಯುಕ್ತರ ಮುಂದೆ ಹಾಜರುಪಡಿಸಿದಲ್ಲಿ ಮಾತ್ರ ಪ್ರಶ್ನಿತ ಸ್ಥಿರಾಸ್ತಿಗಳ ಮುಕ್ತ ಮಾರುಕಟ್ಟೆ ಮೌಲ್ಯ ನಿರ್ಧರಿಸುವ ಅಧಿಕಾರವನ್ನು ಹೊಂದಿರುತ್ತಾರೆಂದು ಹಾಗೂ ಪರಿಹಾರ ವಿತರಿಸಲು ಭೂಸ್ವಾಧೀನ ಕಾಯ್ದೆಯಂತೆ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಸ್ಥಿರಾಸ್ಥಿಗಳ ಮಾರುಕಟ್ಟೆ ಮೌಲ್ಯಗಳನ್ನು ನಿಗಧಿಪಡಿಸಿಕೊಳ್ಳಬೇಕಾಗಿರುತ್ತದೆಂದು ನೋಂದಣಿ ಮಹಾಪರೀವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ಬೆಂಗಳೂರು ರವರು ತಿಳಿಸಿರುತ್ತಾರೆ.

ಜಿಲ್ಲಾ ನೋಂದಣಾಧಿಕಾರಿಗಳು, ಗಾಂಧಿನಗರ ನೋಂದಣಿ ಜಿಲ್ಲೆ ರವರು ಉಲ್ಲೇಖ (4) ರ ಪತ್ರದಲ್ಲಿ ಮೆ॥ ಪವರ್‌ಗ್ರಿಡ್ ವತಿಯಿಂದ ನಿರ್ಮಿಸಲಾಗುತ್ತಿರುವ 400 ಕೆ.ವಿ ಡಿ/ಸಿ ಪಾವಗಡ-ದೇವನಹಳ್ಳಿ ಪ್ರಸರಣ ಮಾರ್ಗ ರಹದಾರಿಗೆ ಪರಿಹಾರ ವಿತರಿಸಲು ಮಾರುಕಟ್ಟೆ ದರ ನಿಗಧಿಪಡಿಸಿ ಸಲ್ಲಿಸುವ ಕುರಿತಂತೆ ಬೆಂಗಳೂರು ಜಿಲ್ಲೆ, ಜಾಲ ಹೋಬಳಿ, ಕುದುರೆಗೆರೆ, ಗಡೇನಹಳ್ಳಿ, ನವರತ್ನ ಅಗ್ರಹಾರ, ತರಬನಹಳ್ಳಿ, ಮೀನಕುಂಟೆ, ದೊಡ್ಡಜಾಲ, ದೊಡ್ಡಜಾಲ ಅಮಾನಿಕೆರೆ, ಹುತ್ತನಹಳ್ಳಿ ಮತ್ತು ಬಾಗಲೂರು ಗ್ರಾಮಗಳ ಜಮೀನುಗಳಿಗೆ ಸಂಬಂಧಿಸಿದಂತೆ 3 ವರ್ಷಗಳಲ್ಲಿ ನೋಂದಣಿಯ ಕ್ರಯದ ಮಾರಾಟದ ವಹಿವಾಟುಗಳನ್ನು ಅಧೀನ ಉಪ ನೋಂದಣಿ ಕಛೇರಿಗಳಿಂದ ಮಾಹಿತಿಯನ್ನು ಪಡೆದು ಪರಿಶೀಲಿಸಿ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ ಹಾಗೂ ಮಾರುಕಟ್ಟೆ ದರ ನಿಗದಿಪಡಿಸುವ ಸಲುವಾಗಿ ಸದರಿ ಗ್ರಾಮಗಳಿಗೆ ಸಂಬಂಧಿಸಿದಂತೆ ಕೇಂದ್ರೀಯ ಸ್ಥಿರಾಸ್ತಿಗಳ ಮಾರುಕಟ್ಟೆ ಮೌಲ್ಯಮಾಪನ ಸಮಿತಿಯು ದರಗಳನ್ನು ನಿಗದಿಪಡಿಸಿ ಸಂ:ನೋ.ಮು/ಸಿವಿಸಿ/485/2017-18 ಬೆಂಗಳೂರು, ದಿನಾಂಕ:05.12.2018 ರಂದು ಅಧಿಸೂಚನೆ ಹೊರಡಿಸಿ ದಿನಾಂಕ:01.01.2019 ರಿಂದ ಜಾರಿಗೊಳಿಸಿರುವ ಮಾರ್ಗಸೂಚಿ ಬೆಲೆಪಟ್ಟಿಯನ್ನು ಸಹ ಸಲ್ಲಿಸಿರುತ್ತಾರೆ.

ಅದರಂತೆ ಮೆ॥ ಪವರ್‌ಗ್ರಿಡ್ ವತಿಯಿಂದ ನಿರ್ಮಿಸಲಾಗುತ್ತಿರುವ 400 ಕೆ.ವಿ ಡಿ/ಸಿ ಪಾವಗಡ-ದೇವನಹಳ್ಳಿ ಪ್ರಸರಣ ಮಾರ್ಗ ಹಾದುಹೋಗುವ ಬೆಂಗಳೂರು ಜಿಲ್ಲೆ, ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಕುದುರೆಗೆರೆ, ಗಡೇನಹಳ್ಳಿ, ನವರತ್ನ ಅಗ್ರಹಾರ, ತರಬನಹಳ್ಳಿ, ಮೀನಕುಂಟೆ, ದೊಡ್ಡಜಾಲ, ದೊಡ್ಡಜಾಲ ಅಮಾನಿಕೆರೆ, ಹುತ್ತನಹಳ್ಳಿ ಮತ್ತು ಬಾಗಲೂರು ಗ್ರಾಮಗಳಿಗೆ ಸಂಬಂಧಿಸಿದಂತೆ ಉಲ್ಲೇಖ (4) ರಂತೆ ಜಿಲ್ಲಾ ನೋಂದಣಾಧಿಕಾರಿಗಳು, ಗಾಂಧಿನಗರ ಜಿಲ್ಲೆ ರವರು ಸಲ್ಲಿಸಿರುವ ಮೂರು ವರ್ಷದ ಮಾರಾಟದ ಅಂಕಿ ಅಂಶಗಳನ್ನಾಧರಿಸಿ ಹೆಚ್ಚುವರಿ ಮಾರುಕಟ್ಟೆ ದರವನ್ನು ನಿಗಧಿಪಡಿಸಿ ಸಲ್ಲಿಸಲು ವಿಶೇಷ ಭೂಸ್ವಾಧೀನಾಧಿಕಾರಿಗಳು, ಬೆಂಗಳೂರು ರವರಿಗೆ ಸೂಚಿಸಲಾದ್ದು, ವಿಶೇಷ ಭೂಸ್ವಾಧೀನಾಧಿಕಾರಿಗಳು, ಬೆಂಗಳೂರು ರವರು ಜಿಲ್ಲಾ ನೋಂದಣಾಧಿಕಾರಿಗಳು, ಗಾಂಧಿನಗರ ಜಿಲ್ಲೆ, ಬೆಂಗಳೂರು ರವರು ಸಲ್ಲಿಸಿರುವ 3 ವರ್ಷ ಮಾರಾಟದ ಅಂಕಿ-ಅಂಶಗಳ ಆಧಾರದ ಮೇಲೆ ಮೇಲ್ಕಂಡ ಗ್ರಾಮಗಳಿಗೆ ಹೆಚ್ಚುವರಿ ಮಾರುಕಟ್ಟೆ ಮೌಲ್ಯದ ಅಂಕಿ ಅಂಶಗಳನ್ನು ಉಲ್ಲೇಖ(5) ರಂತೆ ಸಿದ್ಧಪಡಿಸಿ ಸಲ್ಲಿಸಿರುತ್ತಾರೆ.

ಮೇಲ್ಕಂಡ ಪ್ರಸರಣ ಮಾರ್ಗ ಹಾದುಹೋಗುವ ಬೆಂಗಳೂರು ಜಿಲ್ಲೆ, ಯಲಹಂಕ ತಾಲ್ಲೂಕುಗಳಲ್ಲಿನ ಗ್ರಾಮಗಳಲ್ಲಿನ ಜಮೀನುಗಳ ಮಾರ್ಗಸೂಚಿ ದರ ಹಾಗೂ ಹೆಚ್ಚುವರಿ ಮಾರುಕಟ್ಟೆ ದರಗಳ ತಃಖ್ತೆ ಈ ಕೆಳಕಂಡಂತಿರುತ್ತದೆ.

..3

| ಕ್ರ.ಸ. | ಗ್ರಾಮಗಳು | ಮಾರುಕಟ್ಟೆ ಮೌಲ್ಯಮಾಪನ ಸಮಿತಿಯ ಅಧಿಸೂಚನೆ ದಿನಾಂಕ:05.12.2018 ರಂತೆ ಉಪನೋಂದಣಿ ಕಛೇರಿ ವ್ಯಾಪ್ತಿಯ ಸ್ಥಿರಾಸ್ತಿಗಳ ಅಂದಾಜು ಸರಾಸರಿ ಮಾರುಕಟ್ಟೆ ಮೌಲ್ಯಗಳ ಮಾರ್ಗಸೂಚಿ ದರ ಪಟ್ಟಿ (ರೂ.ಗಳಲ್ಲಿ) | ವಿಶೇಷ ಭೂಸ್ವಾಧೀನಾಧಿಕಾರಿಗಳು, ಬೆಂಗಳೂರು ರವರು ಸಲ್ಲಿಸಿರುವ 3 ವರ್ಷದ ಮಾರಾಟದ ಅಂಕಿ ಅಂಶಗಳಲ್ಲಿ ಗರಿಷ್ಠ ಬೆಲೆಯ ವಿವರ (ಎಕರೆ ಒಂದಕ್ಕೆ ಮಾರಾಟವಾದ ಬೆಲೆ) (ರೂ.ಗಳಲ್ಲಿ) |
|---|---|---|---|
| 1 | ಕುದುರೆಗೆರೆ | 76,00,000/- | 2,19,84,720/- |
| 2 | ಗಡೇನಹಳ್ಳಿ | 93,00,000/- | 1,82,00,000/- |
| 3 | ನವರತ್ನ ಅಗ್ರಹಾರ | 2,12,00,000/- | 3,35,71,440/- |
| 4 | ತರಬನಹಳ್ಳಿ | 1,15,00,000/- | 6,66,66,680/- |
| 5 | ಮೀನಕುಂಟೆ | 2,31,00,000/- | 5,00,00,000/- |
| 6 | ದೊಡ್ಡಜಾಲ ಅಮಾನಿಕೆರೆ | 96,00,000/- | 3,24,16,000/- |
| 7 | ದೊಡ್ಡಜಾಲ | 1,58,00,000/- | 4,61,63,080/- |
| 8 | ಹುತ್ತನಹಳ್ಳಿ | 1,23,00,000/- | 4,05,20,000/- |
| 9 | ಬಾಗಲೂರು | 1,00,00,000/- | 4,63,60,000/- |

ಅದರಂತೆ ಮೆ॥ ಪವರ್‌ಗ್ರಿಡ್ ವತಿಯಿಂದ ನಿರ್ಮಿಸಲಾಗುತ್ತಿರುವ 400 ಕೆ.ವಿ ಡಿ/ಸಿ ಪಾವಗಡ-ದೇವನಹಳ್ಳಿ ಪ್ರಸರಣ ಮಾರ್ಗ ರಹದಾರಿಗೆ ಪರಿಹಾರ ವಿತರಿಸಲು ಮಾರುಕಟ್ಟೆ ದರವನ್ನು ನಿಗಧಿಪಡಿಸಲು ಈ ಕೆಳಕಂಡಂತೆ ಆದೇಶಿಸಿದೆ.

<u>ಸಂ:ಎಂಎಜಿ(4)ಮಿಸ್/ಸಿಆರ್/376/2011-12(ವಿ-5)</u> <u>ದಿನಾಂಕ:18.12.2019.</u>

**<u>ಆದೇಶ</u>**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಮೆ॥ ಪವರ್‌ಗ್ರಿಡ್ ವತಿಯಿಂದ ನಿರ್ಮಿಸಲಾಗುತ್ತಿರುವ 400 ಕೆ.ವಿ ಡಿ/ಸಿ ಪಾವಗಡ-ದೇವನಹಳ್ಳಿ ಪ್ರಸರಣ ಮಾರ್ಗ ಹಾಗೂ ಟವರ್ ನಿರ್ಮಾಣವಾಗುತ್ತಿರುವ ಗ್ರಾಮಗಳ ಜಮೀನುಗಳಿಗೆ ಮಾರುಕಟ್ಟೆ ದರವನ್ನು ಈ ಕೆಳಕಂಡ ತಃಖ್ತೆಯಲ್ಲಿ ವಿವರಿಸಿರುವಂತೆ ನಿಗಧಿಪಡಿಸಿದೆ.

ಈ ಕೆಳಕಂಡಂತೆ ನಿಗದಿಪಡಿಸಿರುವ ದರದಲ್ಲಿ ಸದರಿ ಪ್ರಸರಣ ಮಾರ್ಗ ಹಾದು ಹೋಗುವ ಗ್ರಾಮಗಳಲ್ಲಿನ ಜಮೀನುಗಳಲ್ಲಿನ 46 ಮೀಟರ್ ಕಾರಿಡಾರ್‌ಗೆ ಟವರ್ ನಿರ್ಮಾಣದ ಪ್ರದೇಶಕ್ಕೆ ಶೇ.85% ರಷ್ಟು ಹಾಗೂ ಲೈನ್ ನಿರ್ಮಾಣದ ಪ್ರದೇಶಕ್ಕೆ ಶೇ.15% ರಷ್ಟು ಪರಿಹಾರವನ್ನು ಪಾವತಿಸಲು ಆದೇಶಿಸಿದೆ.

ಪರಿಹಾರ ಹಣವನ್ನು ಸಂಬಂಧಿಸಿದ ಭೂ ಮಾಲೀಕರು/ರೈತರಿಗೆ/ಖಾತೆದಾರರುಗಳಿಗೆ ವಿತರಿಸಲು ಮೆ॥ ಪವರ್‌ಗ್ರಿಡ್ ರವರಿಗೆ ಹಾಗೂ ಪರಿಹಾರ ಹಣವನ್ನು ಪಡೆದುಕೊಂಡ ನಂತರ ಟವರ್ ನಿರ್ಮಾಣ ಹಾಗೂ ಪ್ರಸರಣ ಮಾರ್ಗವನ್ನು ಅಳವಡಿಸುವ ಕಾರ್ಯಗಳಿಗೆ ತೊಂದರೆ ಮಾಡದಂತೆ ಸಂಬಂಧಿಸಿದ ಜಮೀನುಗಳ ಭೂಮಾಲೀಕರಿಗೆ/ರೈತರಿಗೆ/ಖಾತೆದಾರರಿಗೆ ಆದೇಶಿಸಿದೆ ಹಾಗೂ ಮೆ॥ ಪವರ್‌ಗ್ರಿಡ್ ರವರ ಕೆಲಸಗಳಿಗೆ ಯಾವುದೇ ಅಡಚಣೆಯಾಗದಂತೆ ಪೊಲೀಸ್ ಇಲಾಖೆ ವತಿಯಿಂದ ಅಗತ್ಯ ಕ್ರಮ ಕೈಗೊಳ್ಳಲು ಸಹ ಆದೇಶಿಸಿದೆ.

ಜಿಲ್ಲಾ ದಂಡಾಧಿಕಾರಿಗಳು ಬೆಂಗಳೂರು ಜಿಲ್ಲೆ, ಬೆಂಗಳೂರು Bangalore

..4

| ಕ್ರ.ಸಂ. | ಗ್ರಾಮಗಳು | ಕರ್ನಾಟಕ ಮುದ್ರಾಂಕ ಅಧಿನಿಯಮ 1957 ಕಲಂ 2 (1) mm ರಂತೆ ಎಕರೆ ಒಂದಕ್ಕೆ ಪರಿಹಾರವನ್ನು ವಿತರಿಸಲು ನಿಗದಿಪಡಿಸಿರುವ ಮಾರುಕಟ್ಟೆ ಬೆಲೆ (ರೂ.ಗಳಲ್ಲಿ) |
|---|---|---|
| 1 | ಕುದುರೆಗೆರೆ | 2.19.84.720/- |
| 2 | ಗಡೇನಹಳ್ಳಿ | 1.82.00.000/- |
| 3 | ನವರತ್ನ ಅಗ್ರಹಾರ | 3.35.71.440/- |
| 4 | ತರಬನಹಳ್ಳಿ | 6.66.66.680/- |
| 5 | ಮೀನಕುಂಟೆ | 5.00.00.000/- |
| 6 | ದೊಡ್ಡಜಾಲ ಅಮಾನಿಕೆರೆ | 3.24.16.000/- |
| 7 | ದೊಡ್ಡಜಾಲ | 4.61.63.080/- |
| 8 | ಹುತ್ತನಹಳ್ಳಿ | 4.05.20.000/- |
| 9 | ಬಾಗಲೂರು | 4.63.60.000/- |

ಸಹಿ/-

(ಜಿ.ಎನ್.ಶಿವಮೂರ್ತಿ)

ಜಿಲ್ಲಾಧಿಕಾರಿಗಳು ಹಾಗೂ

ಜಿಲ್ಲಾ ದಂಡಾಧಿಕಾರಿಗಳು

ಬೆಂಗಳೂರು ಜಿಲ್ಲೆ. ಬೆಂಗಳೂರು.

ಪ್ರತಿಯನ್ನು:

1. ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳವರ ಆಪ್ತ ಕಾರ್ಯದರ್ಶಿಗಳು. ವಿಧಾನಸೌಧ. ಬೆಂಗಳೂರು ರವರಿಗೆ ಕಳುಹಿಸುತ್ತಾ. ಮಾನ್ಯ ಮುಖ್ಯ ಕಾರ್ಯದರ್ಶಿಗಳವರ ಅವಗಾಹನೆಗೆ ಸಲ್ಲಿಸಲು ಕೋರಿದೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು. ಇಂಧನ ಇಲಾಖೆ. ವಿಕಾಸಸೌಧ. ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ. ಬಹುಮಹಡಿಗಳ ಕಟ್ಟಡ. ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಜನರಲ್ ಮ್ಯಾನೇಜರ್. ಮೆ॥ ಪವರ್ ಗ್ರೀಡ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿ. ಸಿಂಗನಾಯಕನಹಳ್ಳಿ. ಯಲಹಂಕ ಹೋಬಳಿ. ಬೆಂಗಳೂರು-64 ರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
5. ಪೋಲೀಸ್ ಆಯುಕ್ತರು. ಬೆಂಗಳೂರು ನಗರ ಹಾಗೂ ಪೋಲೀಸ್ ಅಧೀಕ್ಷಕರು. ಬೆಂಗಳೂರು ಜಿಲ್ಲೆ ರವರಿಗೆ ಕಳುಹಿಸುತ್ತಾ. ಮೆ॥ಪವರ್ ಗ್ರಿಡ್ ಕಾರ್ಪೋರೇಷನ್ ಇಂಡಿಯಾ ಲಿ.. ರವರು ಸಂಬಂಧಿಸಿದ ಭೂಮಾಲಿಕರಿಗೆ/ರೈತರಿಗೆ/ ಖಾತೆದಾರರಿಗೆ ಪರಿಹಾರ ಹಣವನ್ನು ವಿತರಿಸಿದ ನಂತರ ಪವರ್ ಗ್ರಿಡ್ ನಿರ್ಮಾಣ ಹಾಗೂ ಲೈನ್‌ಗಳನ್ನು ಅಳವಡಿಸುವ ಕಾರ್ಯಕ್ಕೆ ಅಡಚಣೆಯಾಗದಂತೆ ಅಗತ್ಯ ಪೋಲೀಸ್ ಬಂದೋಬಸ್ತ್ ಕ್ರಮ ಕೈಗೊಳ್ಳಲು ಕೋರಿದೆ.
6. ಉಪ ವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪ ವಿಭಾಗ. ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
7. ತಹಶೀಲ್ದಾರ್. ಯಲಹಂಕ ತಾಲ್ಲೂಕುರವರುಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

ಜಿಲ್ಲಾಧಿಕಾರಿಗಳು ಹಾಗೂ

ಜಿಲ್ಲಾ ದಂಡಾಧಿಕಾರಿಗಳು

ಬೆಂಗಳೂರು ಜಿಲ್ಲೆ. ಬೆಂಗಳೂರು.